# ಸಂವಿಧಾನ ರಚನೆ ಕುರಿತ ಸ್ಪೀಕರ್ ಹೇಳಿಕೆ ವಿವಾದ

## ಸಂವಿಧಾನ ಕರಡು ರಚಿಸಿದ್ದು ಬಿ.ಎನ್.ರಾವ್ ಎಂಬ ಕಾಗೇರಿ ಹೇಳಿಕೆಗೆ ಆಕ್ಷೇಪ। ನನ್ನ ಭಾಷಣ ತಿದ್ದುತ್ತೇನೆ: ಸದನಕ್ಕೆ ಸ್ಪೀಕರ್ ಸ್ಪಷ್ಟನೆ

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

ಭಾರತದ ಸಂವಿಧಾನದ ಮೂಲ ಕರಡನ್ನು ಮಂಗಳೂರು ಮೂಲದ ಬಿ.ಎನ್.ರಾವ್ ರಚಿಸಿದ್ದರು ಎಂಬ ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಭಾಷಣಕ್ಕೆ ಕಾಂಗ್ರೆಸ್ ಸದಸ್ಯರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದ್ದು, ಸ್ವತಃ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೂ ಆಕ್ಷೇಪಕ್ಕೆ ಧ್ವನಿಗೂಡಿಸಿದರು. ಅಂತಿಮವಾಗಿ ಇದನ್ನು ಪ್ರಮಾದ ಎಂದು ಒಪ್ಪಿಕೊಂಡ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಮ್ಮ ಭಾಷಣದ ಪರಿಷ್ಕೃತ ಪ್ರತಿಯನ್ನು ಸದನದಲ್ಲಿ ಮಂಡಿಸುವುದಾಗಿ ಸ್ಪಷ್ಟನೆ ನೀಡಿದ. ಘಟನೆ ಬುಧವಾರ ವಿಧಾನಸಭೆಯಲ್ಲಿ ನಡೆಯಿತು.

ಭಾರತದ ಸಂವಿಧಾನದ ಮೂಲ ಕರಡನ್ನು ಬಿ.ಎನ್.ರಾವ್ ರಚಿಸಿದ್ದು, ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದಲ್ಲಿ ಮಾರ್ಪಾಡುಗಳೊಂದಿಗೆ ಸಂವಿಧಾನ ರಚನೆ ಮಾಡಲಾಯಿತು ಎಂದು ಮಂಗಳವಾರ ಸಂವಿಧಾನದ ಮೇಲಿನ ಚರ್ಚೆ ವೇಳೆ ವಿಶ್ವೇಶ್ವರ ಹೆಗಡೆ ಅಭಿಪ್ರಾಯಪಟ್ಟಿದ್ದರು. ಈ ಬಗೆಗಿನ ಲಿಖಿತ ಭಾಷಣವನ್ನೂ ಸದನದಲ್ಲಿ ಮಂಡಿಸಿದ್ದರು.

ಬುಧವಾರ ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರಾದ ಎಚ್.ಕೆ. ಪಾಟೀಲ್ ಹಾಗೂ ಮಾಜಿ ಸ್ಪೀಕರ್ ಕೆ.ಆರ್. ರಮೇಶ್‌ಕುಮಾರ್ ಅವರು, ಸಂವಿಧಾನದ ಮೂಲ ಕರಡು ರಚನೆಯ ಶ್ರೇಯವನ್ನು ಬಿ.ಎನ್.ರಾವ್ ಅವರಿಗೆ ನೀಡಿದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಧ್ವನಿಗೂಡಿಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಂವಿಧಾನ ರಚನೆಯ ಎಲ್ಲಾ ಗೌರವವೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಲ್ಲಬೇಕು ಎಂದು ಪ್ರತಿಪಾದಿಸಿದರು.

ಈ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಂಗಳವಾರ ಸಂವಿಧಾನದ ಕುರಿತು ಸದನದಲ್ಲಿ ಮಂಡಿಸಿದ ತಮ್ಮ ಭಾಷಣದಲ್ಲಿ ಆಗಿರುವ ಲೋಪವನ್ನು ತಿದ್ದಿಕೊಳ್ಳುವುದಾಗಿ ಹೇಳಿದರು. ಬಿ.ಎನ್.ರಾವ್ ಅವರು ಸಂವಿಧಾನದ ರಚನಾ ಸಭೆಯ ಸಲಹೆಗಾರರಾಗಿ ಕಾರ್ಯನಿರ್ವಹಿಸಿದರು ಎಂಬಲ್ಲಿಗೆ ನಿಲ್ಲಿಸಿ ಉಳಿದದ್ದನ್ನು ತಿದ್ದುಪಡಿ ಮಾಡಿ ಪರಿಷ್ಕೃತ ಲಿಖಿತ ಭಾಷಣವನ್ನು ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು.

ಮೊದಲು ಮಾತನಾಡಿದ ಕಾಂಗ್ರೆಸ್ ಸದಸ್ಯ ಎಚ್.ಕೆ. ಪಾಟೀಲ್, ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪೂರ್ವಾಶ್ರಮದ ಪ್ರಭಾವದೊಂದಿಗೆ ಸಂವಿಧಾನದ ಕುರಿತು ಭಾಷಣ ಮಂಡಿಸಿದ್ದಾರೆ. ಮೂಲ ಕರಡು ಬಿ.ಎನ್.ರಾವ್ ರಚಿಸಿದ್ದಾರೆ



ಎಂದು ಹೇಳುವ ಮೂಲಕ ದೊಡ್ಡ ಇತಿಹಾಸವನ್ನು ತಿರುಚಲು ಯತ್ನಿಸಿದ್ದಾರೆ. ದೊಡ್ಡ ಸ್ಥಾನದಲ್ಲಿ ಕುಳಿತು ಇಂತಹ ವಿಷಯಗಳ ಬಗ್ಗೆ ಮಾತನಾಡುವಾಗ ಪ್ರಾಮಾಣಿಕತೆ ಹಾಗೂ ನೈತಿಕತೆಯಿಂದ ಮಾತನಾಡಬೇಕಾಗುತ್ತದೆ. ಮೂಲ ಕರಡು ರಚನೆ ಮಾಡಿದ್ದು ಯಾರು ಎಂಬ ಬಗ್ಗೆ ನೀವು ಸಂವಿಧಾನದ ಕುರಿತ ಇತರೆ ಪುಸ್ತಕಗಳನ್ನು ಓದಿ ನೋಡಿ ಎಂದು ಸಲಹೆ ನೀಡಿದರು.

**ಅಂಬೇಡ್ಕರ್ ಅವರದ್ದು ಸಿಂಗಲ್ ಮ್ಯಾನ್ ಶೋ:** ಈ ವೇಳೆ ಮಾಜಿ ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್, ಕರಡು ರಚನಾ ಸಭೆಯಲ್ಲಿ ಏಳು ಸದಸ್ಯರು ಇದ್ದರು. ಸಾಂವಿಧಾನಿಕ ಸದನದಲ್ಲಿ ಟಿ.ಟಿ. ಕೃಷ್ಣಮಾಚಾರಿ ಅವರು ಹೇಳಿದಂತೆ ರಚನಾ ಸಭೆಯಲ್ಲಿದ್ದ ಏಳು ಸದಸ್ಯರ ಪೈಕಿ ಒಬ್ಬರು ಮೃತಪಟ್ಟರು. ಒಬ್ಬರು ಅಮೆರಿಕಕ್ಕೆ ತೆರಳಿ ಮತ್ತೊಬ್ಬರು ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡರು. ಉಳಿದಂತೆ ಇಬ್ಬರು ಸಭೆಗಳಿಗೆ ಹಾಜರಾಗಲಿಲ್ಲ. ಬಿ.ಎನ್. ರಾವ್ ಅವರ ಪಾಂಡಿತ್ಯದ ಬಗ್ಗೆ ಯಾರೂ ಆಕ್ಷೇಪ ವ್ಯಕ್ತಪಡಿಸುವುದಿಲ್ಲ. ಆದರೆ ಸಂವಿಧಾನದ ಕರಡು ರಚನೆಯಲ್ಲಿ ಅಂಬೇಡ್ಕರ್ ಅವರದ್ದು ಸಿಂಗಲ್ ಮ್ಯಾನ್ ಶೋ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅಂಬೇಡ್ಕರ್ ಅವರು ಒಬ್ಬರೇ ಸಂವಿಧಾನ ರಚನೆಗೆ ಅಗತ್ಯವಾದ ಎಲ್ಲಾ ಶೈಕ್ಷಣಿಕ ಅರ್ಹತೆ ಪೂರೈಸಿಕೊಂಡು ಬಂದವರು. ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಉದ್ದೇಶಪೂರ್ವಕವಾಗಿ ಈ ರೀತಿ ಹೇಳಿರುವುದಿಲ್ಲ ಎಂದುಕೊಂಡಿದ್ದೇನೆ. ಅವರು ತಿದ್ದಿಕೊಳ್ಳಬೇಕು ಎಂದು ಹೇಳಿದರು.

ಈ ವೇಳೆ ಕುಡಚಿ ಶಾಸಕ ಪಿ. ರಾಜೀವ್ ಮಧ್ಯಪ್ರವೇಶಿಸಿ, 1934ರಲ್ಲಿ ಬಿ.ಎನ್.ರಾವ್ ಅವರು ಭಾರತಕ್ಕೆ ಸಂವಿಧಾನ ರಚಿಸಿದ್ದರು ಎಂದು ಹೇಳಿದರು. ಇದಕ್ಕೆ ಎಚ್.ಕೆ. ಪಾಟೀಲ್ ಆಕ್ಷೇಪ ವ್ಯಕ್ತಪಡಿಸಿ, ಸಂವಿಧಾನದ ಆಶಯಗಳ ಬಗ್ಗೆ ಮಾತ್ರ ಹೇಳಿದ್ದರು. ಅದು ಸಂವಿಧಾನ ಅಥವಾ ಮೂಲ ಕರಡು ಅಲ್ಲ ಎಂದು ಸ್ಪಷ್ಟಪಡಿಸಿದರು. ಈ ವೇಳೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಕೆಲ ಕಾಲ ವಾಗ್ವಾದ ಉಂಟಾಯಿತು.

**ಸಂವಿಧಾನದ ಎಲ್ಲಾ ಗೌರವ ಅಂಬೇಡ್ಕರ್‌ಗೆ ಸಲ್ಲಬೇಕು:** ಈ ವೇಳೆ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂವಿಧಾನ ರಚನೆ ಕುರಿತಾಗಿ ಡಾ.ಬಿ.ಆರ್. ಅಂಬೇಡ್ಕರ್ ಬಗ್ಗೆ ಎಲ್ಲರಿಗೂ ವಿಶೇಷ ಗೌರವ ಇದೆ. ಏಕೆಂದರೆ, ಸಂವಿಧಾನ ರಚನೆಯಲ್ಲಿ ಅವಿರತ ಶ್ರಮಪಟ್ಟವರು ಅಂಬೇಡ್ಕರ್ ಮಾತ್ರ. ಏಳು ಜನರಲ್ಲಿ ಬಹುತೇಕರು ಗೈರು ಹಾಜರಾದರೂ ಒಬ್ಬರೇ ಶ್ರಮ ಹಾಕಿ ಸಂವಿಧಾನವನ್ನು ಪೂರ್ಣಗೊಳಿಸಿದ್ದಾರೆ. ದೇಶದಲ್ಲಿ ದಲಿತರು, ಅಸ್ಪೃಶ್ಯರು ಹಾಗೂ ಹಿಂದುಳಿದವರನ್ನು ಮೇಲೆತ್ತಬೇಕು ಎನ್ನುವ ತುಡಿತ ಹಾಗೂ ಪ್ರೇರಣೆ ಅದಕ್ಕೆ ಕಾರಣ. ಇದನ್ನು ಯಾರೂ ಸಹ ಅಲ್ಲಗಳೆಯಲು ಸಾಧ್ಯವಿಲ್ಲ. ಸಂವಿಧಾನ ರಚನೆಯ ಎಲ್ಲಾ ಗೌರವವೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೇ ಸಲ್ಲಬೇಕು. ಈ ಬಗ್ಗೆ ತಪ್ಪು ಸಂದೇಶ ರವಾನಿಸುವುದು ಬೇಡ ಎಂದು ಸ್ಪಷ್ಟಪಡಿಸಿದರು.